ಅಸಲು ದಾವಾ ಃ 145/2016

ಪಿ.ಡಬ್ಲ್ಯೂ.1

ಸಾಕ್ಷಿಯನ್ನು ದಿನಾಂಕ ಃ 08.01.2018 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಪಾಟೀ ಸವಾಲು ಪ್ರತಿವಾದಿಗಳ ಪರ ವಕೀಲರಾದ ಶ್ರೀ. ಎಸ್ ಜಿ ರವರಿಂದ

ದಾವಾ ಸ್ವತ್ತು ನನ್ನ ತಂದೆ ಖರೀದಿ ಮಾಡಿದ್ದರು. ನಮ್ಮ ತಂದೆಯವರು ಸರ್ವೆ ನಂ. 21/1ಎ ರಲ್ಲಿ 6 ಗುಂಟೆ ಜಮೀನನ್ನೂ ಖರೀದಿಸಿದ್ದರು. ನಮ್ಮ ತಂದೆಯವರ ಹೆಸರಿಗೆ ಇರುವ ಪಹಣಿಗಳನ್ನು ಹಾಜರುಪಡಿಸಿಲ್ಲ, ಆದರೆ ನನ್ನ ಹೆಸರಿಗೆ ಇರುವ ಪಹಣಿಗಳನ್ನು ಹಾಜರುಪಡಿಸಿದ್ದೇನೆ. ದಾವಾ ಆಸ್ತಿಯ ಉತ್ತರಕ್ಕೆ ರಸ್ತೆ ಮತ್ತು ಕೆರೆ ಅಂಗಳ ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣಕ್ಕೆ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ತಿಮ್ಮಯ್ಯನವರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ದಕ್ಷಿಣಕ್ಕೆ ಪ್ರತಿವಾದಿಯವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದ ಪ್ರತಿವಾದಿಯ ಜಮೀನು ಪೂರ್ವಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 27/1ಎ ರಲ್ಲಿ ಪ್ರತಿವಾದಿಗಳಿಗೆ ಸಂಬಂಧಿಸಿದ 14 ಗುಂಟೆ ಜಮೀನಿನ ಪೂರ್ವಕ್ಕೆ ಮೂಡ್ಲಯ್ಯನವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ನಮ್ಮ ಜಮೀನು ಬರುತ್ತದೆ ಎಂದರೆ ಸರಿ. ಉತ್ತರಕ್ಕೆ ರಸ್ತೆ ಮತ್ತು ಉಳಿಕೆ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಹನುಮಕ್ಕನವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.27/1ಎ ಇದು ಪೋಡ್ ಆಗಿಲ್ಲ ಎಂದರೆ ಸರಿ. ನಾವು ನಮ್ಮ ತಂದೆ ಖರೀದಿಸಿದ 6 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಹದ್ದುಬಸ್ತು ಮಾಡಿಸಿಲ್ಲ, ಸಾಕ್ಷಿ ಮುಂದುವರಿದು ಮಾಡಿಲು ಅರ್ಜಿಯನ್ನು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆ ಖರೀದಿಸಿದ 6 ಗುಂಟೆ ಜಮೀನಿನ ಪೂರ್ವಕ್ಕೆ ಮೂಡ್ಲಯ್ಯನವರ ಜಮೀನು ಬರುತ್ತದೆ

ಎಂದರೆ ಸರಿ. ಪಶ್ಚಿಮಕ್ಕೆ ನಮಗೆ ಸೇರಿದ ಬೇರೆ ಜಮೀನುಗಳು ಬರುತ್ತವೆ ಎಂದರೆ ಸರಿ. ಉತ್ತರಕ್ಕೆ ಕೆರೆಯ ಅಂಗಳ ಬರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ. ರಸ್ತೆಯಾದ ನಂತರ ಪ್ರತಿವಾದಿಗಳ ಜಮೀನು ಬರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಅವರ 14 ಗುಂಟೆ ಜಮೀನಿನಲ್ಲಿ ಕಾಯಿ ಶೆಡ್‌ಗಳನ್ನು ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ನಮ್ಮ ಜಮೀನಿನ ಪೂರ್ವ ದಿಕ್ಕಿಗೆ 2 ಗುಂಟೆ ಜಮೀನ್ನನ್ನೂ ಒತ್ತುವರಿ ಮಾಡಿದ್ದಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಜಮೀನ್ನನ್ನೂ ಒತ್ತುವರಿ ಮಾಡಿಲ್ಲ ಮತ್ತು ನಮಗೆ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮಗೆ ಯಾವುದೇ ತೊಂದರೆ ಕೊಡದಿದ್ದರೂ ಅವರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯವರ ಹೆಸರಿಗೆ ಇರುವ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

***ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಆಲಿಸಿ ಮುಂದುಡಲಾಯಿತು***.

ಮುಂದುವರಿದ ಪಾಟೀ ಸವಾಲು

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಸರಿ ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಗುಬ್ಬಿ